
ಲಭ್ಯವಿರುವ ಸಾಹಿತ್ಯ-ದಾಖಲೆ ದಸ್ತಾವೇಜುಗಳು ಸಂಗ್ರಹಿಸಿ-ಕಾಪಾಡಿದ್ದಕ್ಕಿಂತ ಕಳೆದುಹೋಗಿರುವುದೇ ಹೆಚ್ಚು. ಅವರ ಮರಣದ ನಂತರ ಅವರಿದ್ದ ಮನೆ ಖಾಲಿ ಮಾಡುವ ಸಮಯಕ್ಕೆ ಸಾಕಷ್ಟು ಸಾಹಿತ್ಯ ಮಳೆಯ ಪಾಲಾಯಿತು. ಟ್ರಂಕುಗಳಲ್ಲಿದ್ದು ತೆರೆಯದ ಸಾಕಷ್ಟು ದಸ್ತಾವೇಜುಗಳಿಗೆ ಗೆದ್ದಲು ಹಿಡಿದಿತ್ತು. ಅವರ ಬರವಣಿಗೆ ಅನೇಕ ಜಾಗಗಳಲ್ಲಿ ಹರಿದು ಹಂಚಿಹೋಗಿ ಸರಿಯಾಗಿ ಸಂಗ್ರಹವಾಗಿಲ್ಲ. ಅದನ್ನು ಒಟ್ಟುಗೂಡಿಸಲು ಸರಿಯಾದ ಆರ್ಥಿಕ ಮತ್ತು ಮಾನವ ಸಂಪನ್ಮೂಲಗಳನ್ನು ಸರ್ಕಾರಗಳು ಕೊಡಮಾಡದಿರುವುದೂ ಒಂದು ಸತ್ಯವೆಂದು ಗೋಪಾಲ್ ಹೇಳುತ್ತಾರೆ.

ಈ ಎಲ್ಲ ತೊಂದರೆಗಳನ್ನು ಪರಿಗಣಿಸಿದಾಗ ಈ ಪುಸ್ತಕದ ಮಹತ್ವ ನಮಗೆ ತಿಳಿಯುತ್ತದೆ. ಭಕ್ತಿ ಮಾರ್ಗವನ್ನು ಬಿಟ್ಟು, ಜ್ಞಾನ ಮಾರ್ಗದಲ್ಲಿ ಚಲಿಸಿ ನಾವು ಅಂಬೇಡ್ಕರ್ ಅವರ ವಿಚಾರಧಾರೆಯನ್ನು ಅರ್ಥಮಾಡಿಕೊಳ್ಳಬೇಕು. ‘ಶಿಷ್ಯ ಗುರುವಿನಿಂದ ಮಾರ್ಗದರ್ಶನವನ್ನಷ್ಟೇ ಪಡೆಯುತ್ತಾನೆ. ಹಾಗೆಂದು ಗುರುವು ಕೊಟ್ಟ ನಿಷ್ಕರ್ಷೆಯನ್ನು ಶಿಷ್ಯ ಒಪ್ಪಿಕೊಳ್ಳಬೇಕಾಗಿಲ್ಲ. ಅದನ್ನು ನಿರಾಕರಿಸುವುದರಲ್ಲಿ ಗುರವಿನ ಕಾಣ್ಕೆಯನ್ನು ಶಿಷ್ಯ ಗುರುತಿಸುತ್ತಾನೆ’ ಎಂದು ಹೇಳುವ ಅಂಬೇಡ್ಕರ್, ಯಾವುದೇ ಸಾಲಿನಲ್ಲಿ ಹಿಂಬಾಲಕನಾಗಿ ನಿಲ್ಲುವುದಕ್ಕಿಂತ, ವಿಚಾರ ಮಾಡಿ ಭಿನ್ನವಾಗಿ ನಿಲ್ಲಬೇಕಿದ್ದರೆ ಅದೇ ಸರಿಯೆನ್ನುತ್ತಾರೆ. ಹೀಗಾಗಿಯೆ ಅವರು ಹೇಳಿದ ‘ನಾನು ಸಮಗ್ರತೆಯಲ್ಲಿ ಅಡಕವಾದ ಭಾಗವಲ್ಲ. ನಾನು ಭಿನ್ನವಾದ ವಿಶಿಷ್ಟ ಭಾಗ’ ಎನ್ನುವ ಮಾತನ್ನು ಗೋಪಾಲ್ ಈ ಪುಸ್ತಕಕ್ಕೆ ಶೀರ್ಷಿಕೆಯಾಗಿ ಉಪಯೋಗಿಸಿದ್ದಾರೆ.

ಅಂಬೇಡ್ಕರ್ ನಮ್ಮ ನಡುವೆ ಪ್ರಖರ ಚಿಂತಕರಾಗಿ ಉಳಿಯಲು ಅವರ ಬಾಲ್ಯಕಾಲದ ಪರಿಸ್ಥಿತಿಯನ್ನು ಪರಿಗಣಿಸಬೇಕು. ಅವರೆದುರಿಸಿದ ಸವಾಲುಗಳನ್ನು ಗೌಣ ಮಾಡದೆಯೇ ಅವರಿಗೆ ಒದಗಿಬಂದ ಅವಕಾಶಗಳನ್ನು ನಾವು ಪರಿಗಣಿಸಬೇಕು. ನಿಜಕ್ಕೂ ಮೇಧಾವಿಯಾದ ಒಬ್ಬ ತನ್ನ ವಿಚಾರಗಳನ್ನು, ವಾದ-ವಿವಾದಗಳನ್ನು ಮಂಡಿಸುವುದಕ್ಕೆ ಸಿಗಬೇಕಾದ ವೇದಿಕೆಯನ್ನು ಕಟ್ಟಿಕೊಳ್ಳುವುದಕ್ಕೆ ಅಂಬೇಡ್ಕರ್ ಒಂದು ಉದಾಹರಣೆಯಾಗಿ ನಿಲ್ಲುತ್ತಾರೆ. ಅಂಬೇಡ್ಕರ್‌ಗೆ ಲಭ್ಯವಾದ ಪರಿಕರಗಳು ಇಲ್ಲದೇ ಎಷ್ಟು ಮೇಧಾವಿಗಳನ್ನು ಅವರ ಜೀವನಸ್ತರ ಮತ್ತು ಅವಕಾಶವಿಹೀನತೆಯಿಂದಾಗಿ ನಾವು ಕಳೆದುಕೊಂಡಿರಬಹುದು ಎಂದು ಊಹಿಸಿದಾಗ ಅಂಬೇಡ್ಕರ್ ಮಂಡಿಸಿದ ಜಾತಿವ್ಯವಸ್ಥೆಯ ವಾದಗಳು ಇನ್ನೂ ಪ್ರಖರವಾಗಿ ನಮ್ಮನ್ನು ತಟ್ಟುತ್ತವೆ.




ಅಂಬೇಡ್ಕರ್ ಅವರ ಮನೆಯಲ್ಲಿ ವಿದ್ಯೆಗೆ ಪ್ರಾಮುಖ್ಯತೆಯಿತ್ತು. ‘ನಮ್ಮದು ಬಡ ಸಂಸಾರವಾಗಿದ್ದರೂ ಮನೆಯ ವಾತಾವರಣದಲ್ಲಿ ಮುಂದುವರೆದ ಸುಶಿಕ್ಷಿತ ಸಂಸಾರಗಳ ವಾತಾವರಣವಿತ್ತು. ನಮ್ಮ ತಂದೆಗೆ ನಾವೆಲ್ಲರೂ ಸುಶಿಕ್ಷಿತರಾಗಿ ಒಳ್ಳೆಯ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಬೇಕೆಂಬ ತೀವ್ರ ಬಯಕೆಯಿತ್ತು’ ಎಂದು ಹೇಳುತ್ತಾರೆ. ಇದು ಪ್ರಮುಖವಾದ ವಿಚಾರ. ಮನೆಯ ವಾತಾವರಣದಲ್ಲಿ ವಿದ್ಯೆಯ ಮಹತ್ವವನ್ನು ಗುರುತಿಸಲೂ ಒಂದು ಸ್ತರದ ಅರಿವಿರಬೇಕು. ವಿದ್ಯೆ ಮತ್ತು ತಾಲೀಮಿನಿಂದ ಸಾಧಿಸಬಹುದಾದ್ದನ್ನು ಗುರುತಿಸುವುದಕ್ಕೆ ಅದೇ ಸಂದರ್ಭದಲ್ಲಿ ಹುಟ್ಟಿ ಬೆಳೆದು ಸಫಲರಾಗಿರುವವರ ಮಾದರಿಗಳಿರಬೇಕು. ಇಲ್ಲದಿದ್ದರೆ ಸಾಮಾಜಿಕ ಪ್ರಗತಿ ಸಾಧಿಸುವುದು ಕಷ್ಟ ಎಂದು ಸಾಮಾಜಿಕ ಏಳಿಗೆಯ ಬಗ್ಗೆ ಸವಿಸ್ತಾರ ಅಧ್ಯಯನಗಳನ್ನು ಮಾಡಿರುವ ಅನಿರುಧ್ ಕೃಷ್ಣ ಹೇಳುತ್ತಾರೆ.

ಮನೆಯ ವಾತಾವರಣದ ಜೊತೆಜೊತೆಗೆ